

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಸಮೀಪದ ಹಂಪಿ, ವಿಶ್ವ ಪರಂಪರೆಯ ಪ್ರಖ್ಯಾತ ಕೇಂದ್ರ. ಹಂಪಿಗೆ ಕೇವಲ 15 ಕಿ.ಮೀ. ದೂರದಲ್ಲಿದೆ ದರೋಜಿ ಕರಡಿ ಧಾಮ. 1994ರ ಅ. 17ರಂದು ರೂಪುಗೊಂಡ ಈ ಕರಡಿಧಾಮಕ್ಕೀಗ ಇಪ್ಪತ್ತೈದು ವರ್ಷ; ಬೆಳ್ಳಿಹಬ್ಬದ ಸಂಭ್ರಮ.

ಸುಮಾರು 5587.30 ಹೆಕ್ಟೇರ್ ವಿಸ್ತೀರ್ಣದ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯವೇ ಕರಡಿಧಾಮವಾಗಿ ರೂಪುಗೊಂಡಿದೆ. ಈ ಪ್ರದೇಶ ಅನಾದಿ ಕಾಲದಿಂದಲೂ ಕರಡಿಗಳ ನೆಲೆಯಾಗಿತ್ತು. ತುಂಗಭದ್ರಾ ಅಣೆಕಟ್ಟು ಬಂದು ಬರಡು ಭೂಮಿಯೆಲ್ಲಾ ಹಸುರಾದ ಮೇಲೆ, ಮನುಷ್ಯ–ವನ್ಯಮೃಗಗಳ ನಡುವಣ ಸಂಘರ್ಷ ಆರಂಭವಾಯಿತು. ಗದ್ದೆಗಳಲ್ಲಿ ಬೆಳೆಯುತ್ತಿದ್ದ ಕಬ್ಬು, ಬಾಳೆಯ ಸೆಳೆತದಿಂದ ಕರಡಿಗಳು ಹೊಲಗಳ ಮೇಲೆ ದಾಳಿ ಇಡಲಾರಂಭಿಸಿದವು. ಇದಕ್ಕೆ ಪ್ರತಿಯಾಗಿ ಗ್ರಾಮಸ್ಥರೂ ದಾಳಿ ನಡೆಸಿ, ಕರಡಿಗಳನ್ನು ಕೊಂದು ಹಾಕುತ್ತಿದ್ದರು. ಮಾನವ ಕರಡಿಗಳ ಸಂಘರ್ಷದ ದೂರುಗಳು ದಿನೇ ದಿನೇ ಹೆಚ್ಚಾಗತೊಡಗಿದವು. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಖ್ಯಾತ ವನ್ಯಜೀವಿ ಛಾಯಾಗ್ರಾಹಕರೂ, ಮಾಜಿ ಸಚಿವರೂ ಆದ ಎಂ.ವೈ. ಘೋರ್ಪಡೆಯವರು ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಮುಂದಾದರು. ಆಗ ರೂಪುಗೊಂಡಿದ್ದು ಕರಡಿಧಾಮ.

ವಿಶ್ವದ ಮೊದಲ ಕರಡಿಧಾಮ ಎನ್ನುವುದು ಇದರ ಹೆಗ್ಗಳಿಕೆ. 2009ರಲ್ಲಿ ಬುಕ್ಕಸಾಗರ ಕಾಯ್ದಿಟ್ಟ ಪ್ರದೇಶದ 2685.50 ಹೆಕ್ಟೇರ್ ಪ್ರದೇಶದ ಸೇರ್ಪಡೆಯೊಂದಿಗೆ ಪ್ರಸ್ತುತ ಈ ಧಾಮ, ಒಟ್ಟು 8272.80 ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿದೆ.

ಆರಂಭದಲ್ಲಿ ಅಲ್ಲಿದ್ದುದು ಬರೀ ಕಲ್ಲು ಬಂಡೆಗಳು, ಮುಳ್ಳು ಪೊದೆಗಳು ಹಾಗೂ ಕಡಿದ ಮರಗಳ ಬೊಡ್ಡೆಗಳು ಮಾತ್ರ. ಅರಣ್ಯ ಇಲಾಖೆಯ ಸಿಬ್ಬಂದಿಗಳ ಅವಿರತ ಶ್ರಮದಿಂದ ಇಂದು ಹಸಿರಿನಿಂದ ನಳನಳಿಸುತ್ತಿದೆ. ಧಾಮದ ವ್ಯಾಪ್ತಿಯಲ್ಲೀಗ ಕನಿಷ್ಠ 120 ಕರಡಿಗಳಿವೆ. ಮುದ್ದು ಮರಿಗಳು ತಮ್ಮ ತಾಯಿಯ ಬೆನ್ನ ಮೇಲೆ (ಪಿಗ್ಗಿ ಬ್ಯಾಕ್) ಕುಳಿತುಕೊಂಡು ಬರುವ ದೃಶ್ಯ ನಯನ ಮನೋಹರ.

ನೀರುನಾಯಿ, ನರಿ, ಚಿರತೆ, ತೋಳ, ಕತ್ತೆಕಿರುಬ, ಕಾಡು ಹಂದಿ, ಮುಳ್ಳು ಹಂದಿ, ಉಡ, ಪೆಂಗೊಲಿಯನ್, ನಕ್ಷತ್ರ ಆಮೆ, ಮಂಗ, ಹಾವು, ಓತಿಕಾಟ, ನವಿಲು, ಕೌಜುಗ ಮುಂತಾದ ವನ್ಯಜೀವಿ–ಪಕ್ಷಿಗಳು ಅಲ್ಲಿ ನೆಲೆ ಕಂಡುಕೊಂಡಿವೆ. 90ಕ್ಕೂ ಹೆಚ್ಚು ಜಾತಿಯ ಪಕ್ಷಿಗಳು, 27ಕ್ಕೂ ಹೆಚ್ಚು ಪ್ರಕಾರದ ಪತಂಗಗಳು, ನೂರಾರು ಜಾತಿಯ ಸಸ್ಯಗಳು ಈ ಧಾಮದಲ್ಲಿವೆ ಎನ್ನುತ್ತಾರೆ ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಹರೀಶ್ ಭಟ್.

ಕರಡಿಗಳಿಗೆ ಬೇಕಾದ ಆಹಾರವನ್ನು ಧಾಮದೊಳಗೇ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಅವು ತಿನ್ನುವ ಕಾರೆ, ಕವಳಿ, ಬೋರೆ, ನೇರಳೆ ಮುಂತಾದ ಕಾಡುಹಣ್ಣಿನ ಗಿಡಗಳು ಹೇರಳವಾಗಿವೆ. ಗೆಡ್ಡೆಗೆಣಸು ಸಾಕಷ್ಟಿದೆ. ಇತ್ತೀಚೆಗೆ ಸೀತಾಫಲ, ಮೆಕ್ಕೆ ಜೋಳ, ಮಾವು, ಪೇರಲ ಹಾಗೂ ಬಾಳೆಯ ನೆಡುತೋಪುಗಳನ್ನು ಬೆಳೆಯಲಾಗಿದೆ. ನೀರಿನ ತೊಟ್ಟಿಗಳು, ಚೆಕ್ ಡ್ಯಾಂ ಮತ್ತು ಪುಟ್ಟ ಪುಟ್ಟ ಕೆರೆಗಳನ್ನು ನಿರ್ಮಿಸಲಾಗಿದೆ. ಕರಡಿಗೆ ಪ್ರಿಯವಾದ ಗೆದ್ದಲು ಹಾಗೂ ಜೇನು ಸ್ವಾಭಾವಿಕವಾಗಿ ಇಲ್ಲಿ ಲಭ್ಯ.

ಭಾರತೀಯ ವನ್ಯಜೀವಿ ಕಾಯ್ದೆಯ 1972 ರ 1 (31 ಸಿ) ಅಡಿಯಲ್ಲಿ ಕರಡಿಯನ್ನು 'ಸಂರಕ್ಷಿತ ಸಸ್ತನಿ' ಎಂದು ವರ್ಗೀಕರಿಸಲಾಗಿದೆ. ಅಳಿವಿನ ಅಂಚಿನಲ್ಲಿರುವ ಕರಡಿ ಹಾಗೂ ವೈಶಿಷ್ಟ್ಯತೆಯನ್ನು ಹೊಂದಿರುವ ದರೋಜಿ ಕರಡಿಧಾಮದ ರಕ್ಷಣೆಗೆ ನಿಲ್ಲುವುದು ಸರಕಾರದ ಜವಾಬ್ದಾರಿ. ಈಗ ಬೆಳ್ಳಿ ಬೆಡಗಿನ ಗರಿ ದರೋಜಿ ಕರಡಿ ಧಾಮದ ಕಿರೀಟಕ್ಕೆ. ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಪರಿಸರ ಪ್ರೇಮಿಗಳ ಸಹಕಾರದಿಂದ ಅರಣ್ಯ ಇಲಾಖೆಯ ಸಿಬ್ಬಂದಿ ಹಗಲಿರುಳು ಶ್ರಮಿಸಿ ಕಲ್ಲು ಬಂಡೆಗಳಲ್ಲಿ ಹಸಿರು ವನರಾಶಿಯನ್ನು ಅರಳಿಸಿದ್ದಾರೆ. ಅರಣ್ಯದ ನೈಸರ್ಗಿಕ ಪುನರುತ್ಪತ್ತಿಯ ಉದಾಹರಣೆ ಇದಾಗಿದೆ. ತಮ್ಮದೇ ಆದ ಪರಿಸರದಲ್ಲಿ ಜೀವಿಸುವ ಈ ಮೃಗದ ಜನ್ಮಸಿದ್ಧ ಹಕ್ಕನ್ನು ದರೋಜಿ ಕರಡಿ ಧಾಮದಲ್ಲಿ ಕಂಡು ಮನಸ್ಸು ಹಿರಿ ಹಿರಿ ಹಿಗ್ಗುವುದು.

## ತಲುಪುವುದು ಹೀಗೆ...

- ಹೊಸಪೇಟೆ, ತೋರಣಗಲ್ಲು ಹತ್ತಿರದ ರೇಲ್ವೆ ನಿಲ್ದಾಣಗಳು. ದರೋಜೆಯಿಂದ 20 ಕಿ.ಮೀ. ದೂರದಲ್ಲಿವೆ. ಹುಬ್ಬಳ್ಳಿ ಮತ್ತು ಗುಂತಕಲ್ ಜಂಕ್ಷನ್‌ನಿಂದ ರೈಲುಗಳು ಅಡ್ಡಾಡುತ್ತವೆ.
- ಬಸ್ಸು; ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ಪ್ರಮುಖ ನಗರಗಳಿಗೆ ಬಳ್ಳಾರಿ/ಹೊಸಪೇಟೆಯಿಂದ ಬಸ್ಸುಗಳಿವೆ.
- ದರೋಜಿ ಧಾಮದ ಪ್ರವೇಶ ಸಮಯ: ಬೆಳಿಗ್ಗೆ 6ರಿಂದ ಸಂಜೆ 6ರ ಅವಧಿ. ಪ್ರವಾಸಿಗರು ವೀಕ್ಷಣಾ ಗೋಪುರದಲ್ಲಿ ಸದ್ದುಗದ್ದಲ ಮಾಡದೇ ಕೂರಬೇಕು. ಎದುರಿಗಿರುವ ಗುಡ್ಡದ ಮೇಲಿಂದ ಕರಡಿಗಳು ಇಳಿದುಬರುವುದನ್ನು ಬೈನಾಕ್ಯುಲರ್‌ನಲ್ಲಿ ನೋಡಿ ಆನಂದಿಸಬಹುದು.

